# ಇ- ಮೇಲ್ ಮತ್ತು ಚಾಟ್ ಚಟುವಟಿಕೆಯ ವಿಷಯ.

ನಾವು ಮೊದಲು ಗೂಗಲ್ ಕ್ರೋಂ  ಓಪನ್ ಮಾಡಿಕೊಳ್ಳಬೇಕು. ನಂತರ ನಾವು ಈಗಾಗಲೇ ಮಾಡಿಕೊಂಡಿರುವ ಗೂಗಲ್ ಅಕೌಂಟ್ ಅನ್ನು ಸೈನ್ ಇನ್ ಮಾಡಿಕೊಂಡು ಇ- ಮೇಲ್ ಓಪನ್ ಮಾಡಿಕೊಳ್ಳಬೇಕು. ಅದರಲ್ಲಿ ಮೊದಲಿಗೆ ಕಾಂಪೋಸ್ ಬರುತ್ತದೆ. ನಂತರ ಕಾಂಪೋಸ್ ಅನ್ನು ಕ್ಲಿಕ್ ಮಾಡಿದಾಗ ಇ-ಮೇಲ್ ಬಾಕ್ಸ್ ಓಪನ್ ಆಗುತ್ತದೆ. ಅದರಲ್ಲಿ ಗೆ, ವಿಳಾಸದಲ್ಲಿ ನಾವು ಯಾರಿಗೆ ಪತ್ರ ಬರೆಯುತ್ತೇವೆಯೋ ಅವರ ವಿಳಾಸ ಬರೆಯಬೇಕು. ನಂತರ ನಾವು ಡಾಕ್ಯುಮೆಂಟ್ಸ್, ಜಾಬ್ ಅಪ್ಲಿಕೇಷನ್, ವಿಡಿಯೋ, ಫೋಟೋಸ್, ಇನ್ನಿತರ ವಿಷಯಗಳನ್ನು ನಾವು ಮೆಸೇಜ್ ಬಾಕ್ಸ್ ನಲ್ಲಿ ಅಟ್ಯಾಚ್ ಫೈಲ್ ಕ್ಲಿಕ್ ಮಾಡಿದಾಗ ಡಾಕ್ಯುಮೆಂಟ್ ಬರುತ್ತದೆ. ಅದರಲ್ಲಿ ನಾವು ಉಳಿಸಿಕೊಂಡಿರುವ ಮಾಹಿತಿಗಳು ಅದರಲ್ಲಿ ಇರುತ್ತದೆ. ಅದನ್ನು ನಾವು ಸೆಲೆಕ್ಟ್ ಮಾಡಿಕೊಂಡು ಮೆಸೇಜ್ ಸೆಂಟ್ ಮಾಡಬೇಕು. ಆಗ ನಾವು ಯಾರಿಗೆ ಕಳುಹುಸಿರುತ್ತೇವೆಯೋ ಅವರಿಗೆ ಐದು ನಿಮಿಷದೊಳಗೆ ನಾವು ಕಳಿಸಬಹುದು. ಆಗಿನ ಕಾಲದಲ್ಲಿ ಒಂದು ವಾರ ಅಥವಾ. ಹದಿನೈದು ದಿನಗಳೇ ಆಗುತ್ತಿತ್ತು. ಈಗ ಇಂಟರ್ನೆಟ್ ಮುಖಾಂತರ ನಾವು ಇ- ಮೇಲ್‌ನಲ್ಲಿ ಬಹು ಬೇಗನೇ ಕಳುಹಿಸಬಹುದು. ಹಾಗೂ ನಾವು ಕಳುಹಿಸಿರುವ ಮೆಸೇಜ್ ಅನ್ನು ನೋಡಲು ಇನ್ ಬಾಕ್ಸ್ ನಲ್ಲಿ ನೋಡಬಹುದು.

ಇನ್ನು ನಾವು ಚಾಟ್ ವಿಷಯಕ್ಕೆ ಬಂದರೆ ನಾವು ನಮ್ಮ ಗೆಳತಿಯರ ಜೊತೆಗೆ, ಫ್ಯಾಮಿಲಿ ಜೊತೆಗೆ ಏನಾದರೂ ಮಾತನಾಡುವ ಹಾಗಿದ್ದರೆ ನಾವು ಮೊಬೈಲ್ ನಲ್ಲಿ ಚಾಟ್ ಮಾಡಬಹುದು. ನಾವು ಏನನ್ನು ಮಾತನಾಡುತ್ತೇವೆಯೋ ಅದನ್ನು ನಾವು ಟೈಪ್ ಮಾಡಿ ಚಾಟ್ ಮುಖಾಂತರ ಸಂದೇಶಗಳನ್ನು ಕಳುಹಿಸಬಹುದು. ಮುಂದಿನ ಚಟುವಟಿಕೆಗಾಗಿ ನಾವು ಮಾಡಿರುವ ವಿಡಿಯೋವನ್ನು ನೋಡಿ ಕಲಿಯಬಹುದು.